೨) ಗೃಹ ರಕ್ಷಕದಳದ ಸ್ವಯಂ ಸೇವಕರಿಗೆ ಟಿರಿಕಾಟ್ ಬಟ್ಟೆಯ ಸಮವಸ್ತ್ರವನ್ನು ಒದಗಿಸುವುದು.

ಶ್ರೀ ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಗೃಹರಕ್ಷಕ ದಳದ ಸ್ವಯಂ ಸೇವಕರಿಗೆ ಕಾಕಿ ಬಟ್ಟೆಯನ್ನು ಒದಗಿಸುತ್ತಿದ್ದಾರೆ. ಈಗ ಒದಗಿಸುತ್ತಿರುವ ಬಟ್ಟೆಯು ಗುಣಮಟ್ಟ ತುಂಬಾ ಕೆಳಮಟ್ಟದಲ್ಲಿರುವುದರಿಂದ ಟಿರಿಕಾಟ್ ಬಟ್ಟೆಯನ್ನು ಒದಗಿಸಿದರೆ ಒಳ್ಳೆಯದು ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ೧೬ ಸಾವಿರ ಸ್ವಯಂಸೇವಕರಿದ್ದಾರೆ ಅವರಿಗೆ ಕೊಡತಕ್ಕ ಅನುಕೂಲಗಳು ಸಾಕಷ್ಟಿಲ್ಲದಿರುವುದರಿಂದ ಟಿರಿಕಾಟ್ ಬಟ್ಟೆಯನ್ನಾದರೂ ಕೊಡ ಬೇಕೆಂದು ಪ್ರಾರ್ಥನೆ ಸಲ್ಲಿಸಿದ್ದೆ. ಅದರ ಬಗ್ಗೆ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಉತ್ತರ ತರಿಸಿಕೊಡುತ್ತೇನೆ.

೩. ಕಲಘಟಗಿ ತಾಲ್ಲೂಕಿನ ರೈತರ ಬೋರ್‌ವೆಲ್‌ಗಳಿಗೆ ವಿದ್ಯುತ್ ಇಲ್ಲದೆ ತೊಂದರೆಯಾಗಿರುವುದು

ಥೇರ್ಮನ್.—ಈಗ ಸಿದ್ದನಗೌಡರು

ಶ್ರೀ ಪಿ. ಸಿ. ಸಿದ್ದನಗೌಡರ್.—ನನಗೆ ಕಾಫಿ ಕಳಂಹಿಸಿಲ್ಲ.

ಥೇರ್ಮನ್.—ಒಂದು ಕಾಫಿ ಕೊಟ್ಟುಬಿಡಿ ಅವರಿಗೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಸರ್, ಕ್ವೆಶ್ಚನ್ ಯಾವುದು ಎಂಬುದು ಗೊತ್ತಾಗಬೇಕು. ನಾವು ಹಲವಾರು ವಿಷಯಗಳ ಬಗ್ಗೆ ಕಳುಹಿಸಿಕೊಟ್ಟಿರುತ್ತೇವೆ. ವಿಷಯ ಯಾವುದು ಎಂದು ಕಳುಹಿಸಿಕೊಟ್ಟರೆ ಹೇಳುತ್ತೇನೆ.

ಥೇರ್ಮನ್.—ಕಲಘಟಗಿ ತಾಲ್ಲೂಕಿನ ರೈತರ ಬಗ್ಗೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಕಲಘಟಗಿ ತಾಲ್ಲೂಕಿನ ರೈತರು ಕಳೆದ ಎರಡು ಮೂರು ವರ್ಷಗಳ ಹಿಂದೆ ಬೋರ್‌ವೆಲ್ ಹಾಕಿಸಿ ವಿದ್ಯುಚ್ಛಕ್ತಿ ಇಲ್ಲದೆ ಬಹಳ ತೊಂದರೆಯಲ್ಲಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಮೆಟೀರಿಯಲ್ಸ್ ಇಲ್ಲಾ ಎಂದು ಪದೇ ಪದೇ ರೈತರಿಗೆ ಹೇಳುತ್ತಾರೆ. ಬರಗಾಲದಿಂದ ಬಳಲುತ್ತಿರುವ ರೈತರಿಗೆ ವಿದ್ಯುಚ್ಛಕ್ತಿ ಪೂರೈಸಿ ಬೇಗನೆ ಕರೆಂಟ್ ಪೂರೈಸಲು ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳನ್ನು ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ. ಹಾಗೂ ಈಗಿದ್ದ ಟಾರ್ಗೆಟ್ಟನ್ನು ಹೆಚ್ಚಿಗೆ ಮಾಡಿ ಕಲಘಟಗಿ ತಾಲ್ಲೂಕಿನಲ್ಲಿ ಹೆಚ್ಚಿಗೆ ಬೋರ್‌ವೆಲ್ಲನ್ನು ರೈತರು ಹಾಕಿರುವುದರಿಂದ ನಿಗದಿ ಮಾಡಿದ ಟಾರ್ಗೆಟ್ಟನ್ನು ಹೆಚ್ಚಿಸಿ ಕೊಳವೆ ಬಾವಿಗೆ ಬೇಗನೆ ವಿದ್ಯುಚ್ಛಕ್ತಿ ಪೂರೈಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಒತ್ತಾಯಪಡಿಸುತ್ತೇನೆ

ಶ್ರೀ ಕೆ. ಹೆಚ್. ರಂಗನಾಥ್ —ಮಾನ್ಯ ಅಧ್ಯಕ್ಷರೆ, ಈಗಾಗಲೇ ಆದೇಶ ಕೊಡಲಾಗಿದೆ. ಇನ್ನು ಏನು ಬಾಕಿ ಉಳಿದಿದೆ ಅದನ್ನು ಅತಿ ಶೀಘ್ರವಾಗಿ ಮಾಡಬೇಕೆಂದು ಸರ್ಕಾರದ ವತಿಯಿಂದ ಆದೇಶ ಕೊಡಲಾಗಿದೆ.

೪. ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ಸಬ್‌ಮರ್ಸಿಬಲ್ ಪಂಪನ್ನು ಅಳವಡಿಸಿ ನೀರಿನ ತೊಂದರೆಯನ್ನು ನೀಗಿಸಲು ಒತ್ತಾಯ

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಹಲವಾರು ಹಳ್ಳಿಗಳಲ್ಲಿ ಜನತೆ ಹಾಗೂ ದನಕರುಗಳಿಗೆ ತೀವ್ರ ತೊಂದರೆಯಾಗಿದ್ದು, ಈ ಹಿಂದೆ ತೋಡಿಸಿದ್ದ ಕೊಳವೆಬಾವಿಗಳು ಬಹುತೇಕ ಬತ್ತಿಹೋಗಿದ್ದು ಮತ್ತೆ ಪ್ರತಿ ಗ್ರಾಮದಲ್ಲೂ ಹೊಸ ಕೊಳವೆ ಬಾವಿಗಳನ್ನು ಹೆಚ್ಚು ಆಳವಾಗಿ ಕೊರೆದು, ಸದರಿ ಕೊಳವೆ ಬಾವಿಗಳಿಗೆ ಸಬ್-ಮರ್ಸಿಬಲ್ ಪಂಪ್ ಆಳವಡಿಸುವ ಮುಖಾಂತರ ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ಸರ್ಕಾರ ವಿಶೇಷವಾಗಿ ಕೋಲಾರ ಜಿಲ್ಲೆಗೆ ಹೆಚ್ಚಿನ ಹಣ ಬಿಡುಗಡೆ ಮಾಡಿ ಕುಡಿಯುವ ನೀರಿನ ತೊಂದರೆ ನಿವಾರಿಸ ಬೇಕಾಗಿ ಸರ್ಕಾರವನ್ನು ಈ ಮೂಲಕ ಒತ್ತಾಯಿಸಿ ಈ ಬಗ್ಗೆ ಹೇಳಿಕೆ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮಾಭಿವೃದ್ಧಿ ಮಂತ್ರಿಗಳು).—ಕೋಲಾರ ಜಿಲ್ಲೆಯಲ್ಲಿ ಜನಪರಿ ಗ್ರಾಂತರ ಕಡೆಯಲ್ಲಿ ಒಟ್ಟು ೨೬೮ ನಳ ನೀರು ಸರಬರಾಜು ಯೋಜನೆಗಳು, ೨೨೭ ಕಿರು ನೀರು ಸರಬ

ರಾಜು ಯೋಜನೆಗಳು ಹಾಗೂ ೭೫೦ಕ್ಕೆ ಪಂಪು ಜೋಡಿಸಿರುವ ಕೊಳವೆ ಬಾವಿಗಳು ಇವೆ. ಇವುಗಳಿಂದ ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಮಾಡಿದ ಪ್ರಕಾರ ಸುಮಾರು ೮೫೦ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದೆ ಎಂದು ತಿಳಿದುಬಂದಿದ್ದು ನೀರಿನ ಅಭಾವ ನೀಗಿಸಲು ಸುಮಾರು ೨ ಕೋಟಿ ಹಣ ಬೇಕಾಗಬಹುದೆಂದು ಜಿಲ್ಲಾಧಿಕಾರಿಗಳು ಅಂದಾಜು ಮಾಡಿದ್ದಾರೆ.

೧೯೯೦-೯೧ರ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ಕೋಲಾರ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಳಿಗಾಗಿ ರೂ. ೧೪೨.೦೦ ಲಕ್ಷ ಹಣವನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಕುಡಿಯುವ ನೀರಿನ ಅಭಾವವಿರುವ ಗ್ರಾಮಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ತಿಗೆ ಆದೇಶ ಕೊಡಲಾಗುವುದು.

೫. ರಾಜ್ಯದ ಗ್ರಾಮ ಪಂಚಾಯಿತಿ ಮತ್ತು ಮಂಡಲಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಮುಷ್ಕರ ಹೂಡಿರುವುದು

ಶ್ರೀ ಡಿ. ಬಿ ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ರಾಜ್ಯದ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳ ಗಮನ ಸೆಳೆಯುವುದಕ್ಕೆ ನಿಯಮ ೩೫೯ರನ್ವಯ ಒಂದು ನೋಟೀಸ್ ಕೊಟ್ಟಿದ್ದೇನೆ. ನಿನ್ನೆಯಿಂದ ರಾಜ್ಯದ ಸುಮಾರು ೧೫ ಸಾವಿರ ಜನ ಹಿಂದಿನ ಗ್ರಾಮಪಂಚಾಯಿತಿ ಮತ್ತು ಇಂದಿನ ಮಂಡಲಗಳಲ್ಲಿ ಕೆಲಸ ಮಾಡತಕ್ಕ ನೌಕರರು ಕಬ್ಬನ್ ಪಾರ್ಕ್‌ನಲ್ಲಿ ಮುಷ್ಕರ, ಕೂತಿದ್ದಾರೆ. ಅವರಿಗೆ ದಿನಕ್ಕೆ ೧ ರೂ. ನಿಂದ ೫ ರೂ. ವರೆಗೆ ಸಂಬಳ ಇದೆ. ಅಂದರೆ ತಿಂಗಳಿಗೆ ೩೦ ರಿಂದ ೧೫೦ ರೂ.ವರೆಗೆ ಸಂಬಳ ಇದೆ. ಇಡೀ ರಾಜ್ಯದ ನೌಕರರು ಇವತ್ತು ನಗರಕ್ಕೆ ಬಂದಿದ್ದಾರೆ. ಅವರು ಒಂದು ಸಾರಿ ಇಲ್ಲಿಂದ ವಾಪಸ್ಸು ಹೋಗುವುದಕ್ಕೆ ಅವರ ೬ ತಿಂಗಳ ಸಂಬಳ ಖರ್ಚು ಆಗುತ್ತದೆ. ಹಾಗೂ ಇನ್ನು ಒಂದು ದಿನ ಹೆಚ್ಚು ಇಲ್ಲಿ ಉಳಿದರೆ ಅವರ ಒಂದು ವರ್ಷದ ವೇತನ ಖರ್ಚು ಆಗುವುದಿದ್ದು, ಈ ಹಣ ಗಳಿಸಲು ಮತ್ತೆ ಒಂದು ವರ್ಷ ದುಡಿಯಬೇಕಾಗುತ್ತದೆ. ಮುಖ್ಯವಾದ ಅವರ ಬೇಡಿಕೆ ಏಂದರೆ ಅವರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕೆಂಬುದು ಇದು ಸಾಧ್ಯ ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಕಳೆದ ೧೫ ವರ್ಷಗಳಿಂದ ಕೆಲಸ ಮಾಡಿದ್ದಾರೆ. ಅವರು ಇವತ್ತು ನಗರಕ್ಕೆ ಬಂದಿದ್ದಾರೆ. ತಾವು ಏನಾದರೂ ಆಲೋಚನೆ ಮಾಡುತ್ತೇವೆಂದು ಹೇಳಿದರೆ ಅವರು ವಾಪಸ್ಸು ಹೋಗುವುದಕ್ಕೆ ಸಿದ್ಧರಿದ್ದಾರೆ ಆದ್ದರಿಂದ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಸರ್ಕಾರದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಏನಾದರೂ ಪರಿಹಾರ ಒದಗಿಸುವುದಕ್ಕೆ ಸಾಧ್ಯವಿದ್ದರೆ ಒದಗಿಸಿ ನಿಮ್ಮಿಂದ ಇದು ಆಗದಿದ್ದರೆ ಬೇರೆ ಯಾರಿಂದಲೂ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಜನ ಬಹಳ ತೀರಾ ಕೆಳಗೆ ಇದ್ದಾರೆ. ನಮ್ಮ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಶೋಷಣೆಗೆ ಸಿಕ್ಕಿರುವ ಇವರಿಗೆ ದಿವಸಕ್ಕೆ ೧ ರೂಪಾಯಿ ಕೊಡಲಾಗುತ್ತಿದೆ. ಇವರು ಈಗ ಕಬ್ಬನ್ ಪಾರ್ಕ್‌ನಲ್ಲಿ ಸೇರಿದ್ದಾರೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆಂದು ಹೇಳಿದ್ದೇನೆ. ಹಾಗೂ ತಂದಿದ್ದೇನೆ. ಏನಾದರೂ ಸಾಧ್ಯವಿದ್ದರೆ ತಾವು ಈ ಮೂಲಕ ಆಶ್ವಾಸನೆ ಕೊಡಿ. ಇಲ್ಲದಿದ್ದರೆ ಕಾಲಾವಕಾಶ ತೆಗೆದುಕೊಂಡು ಇವರ ಬಗ್ಗೆ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಬಹಳ ಅನುಕಂಪದಿಂದ ಈ ವಿಷಯವನ್ನು ಸದನದ ಮುಂದೆ ತಂದಿದ್ದಾರೆ. ಸರ್ಕಾರ ನಡೆಸುವಾಗ ಅನುಕಂಪದ ಜೊತೆಗೆ ಸತ್ಯಾಂಶಗಳನ್ನೂ ಸಹ ನೋಡಬೇಕಾಗುತ್ತದೆ. ಈಗ ಲೋಕಲ್ ಬಾಡೀಸ್ ಮತ್ತು ಮಂಡಲಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಸರ್ಕಾರಿ ನೌಕರರೆಂದೇನೂ ಪರಿಗಣಿಸಿಲ್ಲ. ಅವರು ಸರ್ಕಾರಿ ನೌಕರರು ಅಲ್ಲವೇ ಅಲ್ಲ. ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಏನು ಹಣವನ್ನು ವಸೂಲಿ ಮಾಡುತ್ತಾರೋ ಅದನ್ನು ನೋಡಿ ಆ ಸೀಮಿತದಲ್ಲಿ ಅವರಿಗೆ ಆಲ್ಲಿ ಸಂಬಳ ಕೊಡುವ ವ್ಯವಸ್ಥೆ ಇದೆ. ನಮಗೂ, ಜಿಲ್ಲಾಪರಿಷತ್ತಿಗೂ, ಮಂಡಲ ಪಂಚಾಯಿತಿಯವರಿಗೂ ಏನೂ ಸಂಬಂಧ ಇಲ್ಲ. ಸರ್ಕಾರಕ್ಕೂ ಅವರಿಗೂ ಏನೂ ಸಂಬಂಧ ಇಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಅವರ ಹಣಕಾಸಿನ ವ್ಯವಸ್ಥೆ ನೋಡಿಕೊಂಡು ಅಲ್ಲಿ ವಸೂಲಿ ಮಾಡುವ ಕಂದಾಯ ನೋಡಿಕೊಂಡು ಅಲ್ಲಿ ಅವರಿಗೆ ಸಂಬಳ ಕೊಡುವ ವ್ಯವಸ್ಥೆ ಇದೆ. ಈಗ ಎಲ್ಲರೂ ಚಳುವಳಿ ಮಾಡುತ್ತಿರುವಾಗ ನಾವೂ ಏಕೆ ಚಳುವಳಿ ಮಾಡಬಾರದೆಂದು ಇವರೂ